ದಿನಾಂಕ : 11.02.2019 ರಂದು ಸಾಕ್ಷಿಯನ್ನು ಪ್ರಮಾಣಮಾಡಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಟಿ ವಿ ಎಸ್ ವಕೀಲರಿಂದ :**

5 ನೇ ಯ ಪ್ರತಿವಾದಿ ನನ್ನ ಅಣ್ಣ. ಈ ದಾವೆಯನ್ನು ಎಷ್ಟು ಸ್ವತ್ತುಗಳಿಗೆ ಸಂಬಂದಪಟ್ಟಂತೆ ವಾದಿ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಎಲ್ಲಾ ದಾವಾ ಸ್ವತ್ತುಗಳ ಸರ್ವೆ ನಂಬರ್ ಹಾಗೂ ವಿಸ್ತೀರ್ಣ ಹೇಳಲು ಆಗುವುದಿಲ್ಲ. ದಾವಾ ಸ್ವತ್ತುಗಳ ನಂತರ ಸುಮಾರು 3 – 4 ಸ್ವತ್ತುಗಳು ಬಿಟ್ಟು ನನ್ನ ಸ್ವತ್ತು ಇದೆ. ವಾದಿಗಳಿಗೆ ದಾವಾ ಸ್ವತ್ತು ಅವರ ತಂದೆಯಿಂದ ಬಂದಿರುತ್ತದೆ. ವಾದಿಗಳ ತಂದೆ ಈಗ ಮರಣ ಹೊಂದಿರುತ್ತಾರೆ ಎಂದರೆ ಸರಿ . ದಾವಾ ಅನುಸೂಚಿತ 1 ರ ಆಸ್ತಿಯ ಪೈಕಿ 20 ಗುಂಟೆ ಆಸ್ತಿಯನ್ನು ಆರ್.ಮುನಿವೆಂಕಟಪ್ಪ ಹಾಗೂ ಅಶ್ವತ್ತನಾರಾಯಣ ಎಂಬುವವರು ಸಿ.ನಂಜುಂಡಪ್ಪ ರವರಿಗೆ ಸುಮಾರು 25 ವರ್ಷಗಳ ಹಿಂದೆ ಮಾರಾಟ ಮಾಡಿರುತ್ತಾರೆ. ಸದರಿ ಕ್ರಯಪತ್ರಕ್ಕೆ ಯಾರು ಸಾಕ್ಷಿದಾರರು ಎಂದು ನನಗೆ ಗೊತ್ತಿಲ್ಲ. ಎಷ್ಟು ರೂಪಾಯಿಗೆ ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಕ್ರಯ ಮಾಡಿದ ದಿನಾಂಕ ಮತ್ತು ಕರಯದ ಮೊತ್ತವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿರುತ್ತೇನೆ. ನಾನು ಸದರಿ ಕ್ರಯ ಪತ್ರಕ್ಕೆ ಸಾಕ್ಷಿದಾರನಾಗಿರಲಿಲ್ಲ. ವಾ ದಿಗಳು ಸದರಿ ಕ್ರಯ ಪತ್ರಕ್ಕೆ ಪಕ್ಷಗಾರರಾಗಿರುವ ಬಗ್ಗೆ ನನಗೆ ಗೊತ್ತಿಲ್ಲ.

ವಾದಿಗಳು ಮತ್ತು 1 ರಿಂದ 2 ನೇ ಪ್ರತಿವಾದಿದಗಳು ಪ್ರತ್ಯೇಕವಾಗಿ ವಾಸಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಗಳು ಮತ್ತು 2 ನೇ ಪ್ರತಿವಾದಿ ಮುನಿವೆಂಕಟಪ್ಪನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಮೃತ ಮುನಿವೆಂಕಟಪ್ಪನ ಹೆಂಡತಿ ಎಂದರೆ ಸರಿ . ಮುನಿವೆಂಕಟಪ್ಪ ಮರಣಹೊಂದಿದ ನಂತರ 1 ನೇ ಪ್ರತಿವಾದಿ ಪೌತಿವಾರಸು ಖಾತೆ ಮಾಡಿಕೊಂಡು 1 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿ ಸೇರಿಕೊಂಡು ದಾವಾ ಅನುಸೂಚಿತ 1 ರ ಆಸ್ತಿಯನ್ನು ವಾದಿಗಳಿಗೆ ತಿಳಿಯದಂತೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 5 ನೇ ಪ್ರತಿವಾದಿ ಸದರಿ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ವಾದಿಗಳು ಜನಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಗೆ ದಾವಾ ಅನುಸೂಚಿತ 1 ರ ಆಸ್ತಿಯನ್ನು ಮಾರಾಟ ಮಾಡುವ ಸಂಪೂರ್ಣ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಮುನಿವೆಂಕಟಪ್ಪ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ.

ವಾದಿಗಳಿಗೆ ತೊಂದರೆ ನೀಡಬೇಕು ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ, 5 ನೇ ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಯಾವತ್ತು ಸ್ವಾದೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿ ನನ್ನ ಅಣ್ಣನಾಗಿರುವುದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ

ಮುಂದುವರೆದು ವಾದಿ ಮತ್ತು ಪ್ರತಿವಾದಿಗಳು ಎಲ್ಲರೂ ನನಗೆ ಸಂಬಂದಿಕರು ಎಂದು ನುಡಿಯುತ್ತಾರೆ.

**ಮರು ವಿಚಾರಣೆ :** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಲಾಯಿತು).**

ಓದಿ ಹೇಳಿ ಕೇಳಿ ಸರಿಯಾಗಿದೆ.

(ನಾಗೇಶ ನಾಯ್ಕ)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಶ್ರೀನಿವಾಸಪುರ